# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1553 |
| ಮಾನ್ಯ ಸದಸ್ಯರ ಹೆಸರು | ಶ್ರೀ ಐವನ್ ಡಿ' ಸೋಜಾ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21/03/2025 |
| ಉತ್ತರಿಸುವ ಸಚಿವರು | ಮಾನ್ಯ ಕಾರ್ಮಿಕ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮಂಗಳೂರು ಸಹಾಯಕ ಕಾರ್ಮಿಕ ಕಮೀಷನರ್ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)</td><td>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಮಂಗಳೂರು ಸಹಾಯಕ ಕಾರ್ಮಿಕ ಕಮೀಷನರ್ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಒಟ್ಟು ಸಂಖ್ಯೆ 1,25,587. ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ.</th><th>ಜಿಲ್ಲೆ</th><th>ನೋಂದಣಿಯಾದ ಫಲಾನುಭವಿಗಳ ಸಂಖ್ಯೆ.</th></tr>
<tr><td>1</td><td>ದಕ್ಷಿಣ ಕನ್ನಡ</td><td>71131</td></tr>
<tr><td>2</td><td>ಕೊಡಗು</td><td>6849</td></tr>
<tr><td>3</td><td>ಉಡುಪಿ</td><td>47607</td></tr>
<tr><td></td><td>ಒಟ್ಟು</td><td>1,25,587</td></tr>
</table></td></tr>
<tr><td>ಆ)</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆಗೆ ನೋಂದಾಯಿತ ಅಸಂಘಟಿತ ಖಾಸಗಿ ವಾಣಿಜ್ಯ ಮೋಟಾರು ಸಾರಿಗೆ ಮತ್ತು ಸಂಬಂಧಪಟ್ಟ ಕಾರ್ಮಿಕರನ್ನು ಸಾಮಾಜಿಕ ಭದ್ರತೆ ಯೋಜನೆಗೆ ನೋಂದಾಯಿಸಲಾಗಿದೆ: ನೋಂದಾಯಿಸಲು ಇರುವ ಅವಧಿ ಎಷ್ಟು: ಅರ್ಹತೆಗಳೇನು (ವಿವರ ನೀಡುವುದು)</td><td>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆಗೆ ನೋಂದಾಯಿತ ಅಸಂಘಟಿತ ಖಾಸಗಿ ವಾಣಿಜ್ಯ ಮೋಟಾರು ಸಾರಿಗೆ ಮತ್ತು ಸಂಬಂಧಪಟ್ಟ ಕಾರ್ಮಿಕರನ್ನು ಸಾಮಾಜಿಕ ಭದ್ರತೆ ಯೋಜನೆಗೆ ನೋಂದಾಯಿಸಲು ಇರುವ ಅವಧಿ ಮತ್ತು ಅರ್ಹತೆಗಳ ವಿವರ ಈ ಕೆಳಕಂಡಂತಿದೆ.</td></tr>
</table>

| | | |
|---|---|---|
| | | ಅಸಂಘಟಿತ ವರ್ಗದ ಕಾರ್ಮಿಕರಲ್ಲಿ ಖಾಸಗಿ ವಾಣಿಜ್ಯ ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಸೌಲಭ್ಯಗಳನ್ನು ಒದಗಿಸಲು ಅಗತ್ಯವಿರುವ ಸಂಪನ್ಮೂಲ ಕ್ರೋಢೀಕರಣದ ಉದ್ದೇಶದಿಂದ, ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಅಧಿನಿಯಮ-2024ನ್ನು ಅಧಿಸೂಚಿಸಿದ್ದು, ಇದಕ್ಕೆ ಅನುಗುಣವಾಗಿ ನಿಯಮಾವಳಿಗಳನ್ನು ರೂಪಿಸಿ "ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ"ಯನ್ನು ದಿನಾಂಕ: 07-10-2024 ರಂದು ರಚಿಸಲಾಗಿರುತ್ತದೆ.<br><br>ಈ ಮಂಡಳಿಯಡಿ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರಾದ ಚಾಲಕರು, ನಿರ್ವಾಹಕರು, ಕ್ಲೀನರ್‌ಗಳು, ನಿಲ್ದಾಣ ಸಿಬ್ಬಂದಿಗಳು, ಮರುಪರಿಶೀಲನಾ ಸಿಬ್ಬಂದಿಗಳು, ಬುಕಿಂಗ್ ಗುಮಾಸ್ತರು, ನಗದು ಗುಮಾಸ್ತರು, ಡಿಪೋ ಗುಮಾಸ್ತರು, ಸಮಯ ಸೂಚಕರು, ಕಾವಲುಗಾರ ಅಥವಾ ಪರಿಚಾರಕರು, ಮೋಟಾರು ಗ್ಯಾರೇಜ್ ಗಳಲ್ಲಿ ಟೈರ್ ಜೋಡಿಸುವ ಮತ್ತು ಬೇರ್ಪಡಿಸುವ ಘಟಕಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರು, ಪಂಚರ್ ದುರಸ್ತಿ ಮಳಿಗೆಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರು, ಲೋಡಿಂಗ್ ಮತ್ತು ಅನ್ ಲೋಂಡಿಂಗ್, ವೀಲ್ ಬ್ಯಾಲೆನ್ಸಿಂಗ್ ಮತ್ತು ಅಲೈನ್ಮೆಂಟ್ ಘಟಕಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರು, ನೀರಿನಿಂದ ಸ್ವಚ್ಚಗೊಳಿಸುವ ಘಟಕಗಳಲ್ಲಿ ಕೆಲಸ ಮಾಡುವ ವ್ಯಕ್ತಿ ಮತ್ತು ಮೋಟಾರು ವಾಹನ ಹೊರಕವಚ ನಿರ್ಮಾಣ ಘಟಕಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರು, ಟಿಂಕರಿಂಗ್, ಎಲೆಕ್ಟ್ರಿಕಲ್ ಹಾಗೂ ಎಸಿ ಘಟಕ ಇತ್ಯಾದಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದೆ.<br>ಅರ್ಹತೆ/ಮಾನದಂಡಗಳು<br><br>❖ ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.<br>❖ ವಯೋಮಿತಿ 18 ರಿಂದ 70 ವರ್ಷಗಳು.<br>❖ ಆದಾಯ ತೆರಿಗೆ ಪಾವತಿದಾರರಾಗಿರಬಾರದು. |

<table>
<tr>
<td></td>
<td></td>
<td>
<ul>
<li>ಇ.ಎಸ್.ಐ ಮತ್ತು ಇ.ಪಿ.ಎಫ್ ಸೌಲಭ್ಯ ಹೊಂದಿರಬಾರದು.</li>
<li>ಯೋಜನೆಯ ಸೌಲಭ್ಯಗಳು ಕರ್ತವ್ಯದಲ್ಲಿರುವಾಗ ಹಾಗೂ ಇಲ್ಲದಿರುವಾಗಲೂ ಸಹ ಲಭ್ಯವಾಗುತ್ತವೆ.</li>
</ul>
ಚಾಲಕರು, ಕರ್ನಾಟಕ ರಾಜ್ಯ ಸಾರಿಗೆ ಇಲಾಖೆಯಿಂದ ವಾಣಿಜ್ಯ ವಾಹನ ಚಲಾಯಿಸಲು ಊರ್ಜಿತ ಚಾಲನಾ ಪರವಾನಗಿಯನ್ನು ಹೊಂದಿರುವುದು ಕಡ್ಡಾಯ.<br>ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಈವರೆಗೆ 32784 ಕಾರ್ಮಿಕರನ್ನು ನೋಂದಾಯಿಸಲಾಗಿದ್ದು ಸ್ಮಾರ್ಟ್ ಕಾರ್ಡ್ ನೀಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.
</td>
</tr>
<tr>
<td>ಇ)</td>
<td>ಈವರೆಗೆ ಅಸಂಘಟಿತ ಖಾಸಗಿ ವಾಣಿಜ್ಯ ಮೋಟಾರು ಸಾರಿಗೆ ಚಾಲಕರ ನಿಧಿಯಲ್ಲಿ ಸಂಗ್ರಹಿಸಿದ ಮೊತ್ತ ಎಷ್ಟು: ಎಷ್ಟು ಮಂದಿಗೆ ಪರಿಹಾರ ಒದಗಿಸಲಾಗಿದೆ (ವಿವರ ನೀಡುವುದು)</td>
<td>
ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಈವರೆಗೆ ಅಸಂಘಟಿತ ಖಾಸಗಿ ವಾಣಿಜ್ಯ ಮೋಟಾರು ಸಾರಿಗೆ ಚಾಲಕರ ನಿಧಿಯಲ್ಲಿ ಸಂಗ್ರಹಿಸಿದ ಮೊತ್ತ ಹಾಗೂ ಇಲ್ಲಿಯವರೆಗೆ ಸೌಲಭ್ಯ ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ ಈ ಕೆಳಕಂಡಂತಿದೆ.
<table>
<tr><th colspan="2">ಅಪಘಾತ ಪರಿಹಾರ</th><th colspan="2">ಶೈಕ್ಷಣಿಕ ಧನಸಹಾಯ</th></tr>
<tr><td>ಪ್ರಕರಣಗಳ ಸಂಖ್ಯೆ</td><td>ಪರಿಹಾರದ ಮೊತ್ತ</td><td>ವಿದ್ಯಾರ್ಥಿಗಳ ಸಂಖ್ಯೆ</td><td>ಪರಿಹಾರದ ಮೊತ್ತ</td></tr>
<tr><td>1643</td><td>63,95,12,882/-</td><td>1578</td><td>1,57,80,000/-</td></tr>
</table>
ಹೊಸದಾಗಿ ಅಧಿಸೂಚಿಸಲ್ಪಟ್ಟ, ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಅಧಿನಿಯಮ-2024ರಡಿ ವಿಧಿಸಿದ ಸುಂಕದ ಮೊತ್ತವು ಮಂಡಳಿಗೆ ಇಲ್ಲಿಯವರೆಗೂ ಸ್ವೀಕೃತವಾಗಿರುವುದಿಲ್ಲ.
</td>
</tr>
</table>

| | | |
|---|---|---|
| ಈ) | ಕರ್ನಾಟಕ ಅಸಂಘಟಿತ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಿಗೆ ನೋಂದಾಯಿಸಿದವರಿಗೆ ಇನ್ನೂ ಸ್ಮಾರ್ಟ್ ಕಾರ್ಡ್ ನೀಡಿರುವುದಿಲ್ಲ ಎಂಬ ದೂರುಗಳಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮ ಗಳೇನು: ಎಷ್ಟು ಮಂದಿಗೆ ನೀಡಲಾಗಿದೆ (ಜಿಲ್ಲಾವಾರು ವಿವಿರ ನೀಡುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿಯಡಿ ಸಾರಿಗೆ ಕಾರ್ಮಿಕರನ್ನು ನೋಂದಾಯಿಸುತ್ತಿದ್ದು, ನೊಂದಾಯಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ನೀಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ನೋಂದಾಯಿತ ಕಾರ್ಮಿಕರ ಜಿಲ್ಲಾವಾರು ವಿವರ **ಅನುಬಂಧ**ದಲ್ಲಿ ಒದಗಿಸಿದೆ. |
| ಉ) | ಕಟ್ಟಡ ಕಾರ್ಮಿಕರ ಹೆಸರಿನಲ್ಲಿ ನಕಲಿ ನೋಂದಾವಣೆ ಮಾಡುತ್ತಿದ್ದು, ಇಲಾಖೆಯ ಹಣ ಮತ್ತು ಸವಲತ್ತು ಗಳನ್ನು ದುರುಪಯೋಗ ಮಾಡುತ್ತಿರುವುದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು: (ವಿವರ ನೀಡುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996 ಕರ್ನಾಟಕ ನಿಯಮಗಳು, 2006 ರಲ್ಲಿ ನಿಗಧಿಪಡಿಸಿರುವ ಮಾನದಂಡಗಳನ್ನು ಪೂರೈಸದ ಕಾರ್ಮಿಕರ ನೋಂದಣಿಯನ್ನು ನಿಯಮ 20(7) ರ ಪ್ರಾವಧಾನಗಳನ್ವಯ ಪರಿಶೀಲಿಸಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ರದ್ದುಪಡಿಸಲಾಗುತ್ತಿದೆ.<br><br>ಪ್ರಸ್ತುತ ಮಂಡಳಿಯ ವತಿಯಿಂದ ರಾಜ್ಯಾದಾದ್ಯಂತ 2.43 ಲಕ್ಷ ಅನರ್ಹ ನೋಂದಣಿಯನ್ನು ಪತ್ತೆ ಹಚ್ಚಿ, ಸದರಿ ಎಲ್ಲಾ ನೋಂದಣಿ ಯನ್ನು ರದ್ದು ಪಡಿಸಲಾಗಿರುತ್ತದೆ.<br><br>ರಾಜ್ಯಾದಾದ್ಯಂತ ಅನರ್ಹ ಕಾರ್ಡ್ ಗಳ ರದ್ದತಿಗಾಗಿ 1 ತಿಂಗಳ ಅಭಿಯಾನವನ್ನು ಕೈಗೊಳ್ಳಲಾಗಿರುತ್ತದೆ. ಇದಲ್ಲದೆ, ಕಾರ್ಮಿಕ ಇಲಾಖೆಯ ಕ್ಷೇತ್ರಮಟ್ಟದ ಅಧಿಕಾರಿಗಳು ಕೂಡ ಅನರ್ಹ ನೋಂದಣಿಗಳನ್ನು ರದ್ದು ಪಡಿಸಲು ಕ್ರಮ ಕೈಗೊಳ್ಳುತ್ತಿದ್ದಾರೆ.<br>ಮುಂದುವರೆದು, ಅನರ್ಹ ಕಾರ್ಮಿಕರು ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಿದ್ದಲ್ಲಿ ಸ್ವತಃ ಅವರೇ ಬಂದು ನೋಂದಣಿಯನ್ನು ರದ್ದುಪಡಿಸುಕೊಳ್ಳುವಂತೆ ಮತ್ತು ಮುಂದಿನ ದಿನಗಳಲ್ಲಿ ನೋಂದಣಿಯಾಗದಂತೆ ದಿನ |

| | | |
|---|---|---|
| | | ಪತ್ರಿಕೆಗಳಲ್ಲಿ ರಾಜ್ಯದಾದ್ಯಂತ ಜಾಗೃತಿ ಮೂಡಿಸಲಾಗುತ್ತಿದೆ. |
| | ಕಟ್ಟಡ ಕಾರ್ಮಿಕರಿಗೆ ಅನ್ಯಾಯ ವಾದಾಗ ಅದರ ಪರವಾಗಿ ವಾದ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ರದ್ದುಪಡಿಸಿದ ಕಾರ್ಡುಗಳಿಗೆ ಸಂಬಂಧಿಸಿದಂತೆ ಕಾರ್ಮಿಕರಿಗೆ ತಕರಾರು ಅಥವಾ ಆಕ್ಷೇಪಣೆ ಇದ್ದಲ್ಲಿ ಸಮರ್ಪಕ ದಾಖಲೆಗಳೊಂದಿಗೆ ಕ್ಷೇತ್ರವ್ಯಾಪ್ತಿಯ ಕಾರ್ಮಿಕ ಅಧಿಕಾರಿಗಳ ಕಛೇರಿಗೆ ಮೇಲ್ಮನವಿ ಸಲ್ಲಿಸಲು ಕರ್ನಾಟಕ ನಿಯಮಗಳು, 2006 ರ ನಿಯಮ 20(8) ರಲ್ಲಿ ಅವಕಾಶ ಕಲ್ಪಿಸಲಾಗಿದೆ.<br><br>ನೋಂದಾಯಿತ ಫಲಾನುಭವಿಗಳು ನಿಯಮ 39, 39-ಎ ,40, 40-ಎ, 44 ಮತ್ತು 47ರಡಿ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಿದ್ದಲ್ಲಿ, ಆಯಾ ಕ್ಷೇತ್ರ ವ್ಯಾಪ್ತಿಯ ಉಪ ಕಾರ್ಮಿಕ ಆಯುಕ್ತರ ಕಛೇರಿಗಳಲ್ಲಿ ಹಾಗೂ ನಿಯಮ 41,42,43,45,46,48 ಮತ್ತು 49 ರಡಿ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಿದ್ದಲ್ಲಿ ಆಯಾ ಕ್ಷೇತ್ರ ವ್ಯಾಪ್ತಿಯ ಸಹಾಯಕ ಕಾರ್ಮಿಕ ಆಯುಕ್ತರ ಕಛೇರಿಗಳಲ್ಲಿ ಅರ್ಜಿ ತಿರಸ್ಕೃತಗೊಂಡ 30 ದಿನದೊಳಗಾಗಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ಕರ್ನಾಟಕ ನಿಯಮಗಳು 2006ರ **ನಿಯಮ-49-ಬಿ**ರಲ್ಲಿ ಮೇಲ್ಮನವಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. |

**ಕಾಇ 135 ಎಲ್ ಇಟಿ 2025**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**

ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.1553ಕ್ಕೆ

## ಅನುಬಂಧ

ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ"ಯಡಿ ಸಾರಿಗೆ ಕಾರ್ಮಿಕರನ್ನು ನೋಂದಾಯಿಸಿದ ಜಿಲ್ಲಾವಾರು ವಿವರ

| Sl. No | DISTRICT | Transport Workers |
|---|---|---|
| 1 | BAGALKOTE | 36797 |
| 2 | BALLARI | 32455 |
| 3 | BELAGAVI | 56175 |
| 4 | BENGALURU RURAL | 23722 |
| 5 | BENGALURU URBAN | 91317 |
| 6 | BIDAR | 64614 |
| 7 | CHAMARAJANAGARA | 7051 |
| 8 | CHIKKABALLAPURA | 9893 |
| 9 | CHIKKAMAGALURU | 18850 |
| 10 | CHITRADURGA | 44416 |
| 11 | DAKSHINA KANNADA | 32784 |
| 12 | DAVANGERE | 16685 |
| 13 | DHARWAD | 36274 |
| 14 | GADAG | 31632 |
| 15 | HASSAN | 24579 |
| 16 | HAVERI | 32584 |
| 17 | KALABURAGI | 34515 |
| 18 | KODAGU | 8851 |
| 19 | KOLAR | 28988 |
| 20 | KOPPAL | 7181 |
| 21 | MANDYA | 27708 |
| 22 | MYSURU | 30377 |
| 23 | RAICHUR | 16175 |
| 24 | RAMANAGARA | 29025 |
| 25 | SHIVAMOGGA | 30231 |
| 26 | TUMAKURU | 26218 |
| 27 | UDUPI | 25162 |
| 28 | UTTARA KANNADA | 10401 |
| 29 | VIJAYANAGAR | 32276 |
| 30 | VIJAYAPURA | 31846 |
| 31 | YADGIR | 6200 |
| **Grand Total** | | **904982** |